ಶ್ರೀ ವಾಟಾಳ್ ನಾಗರಾಜ್ ಅವರು ಏನೇ ಹೇಳಿದರೂ ಸಹ ತಾವು ಅವರನ್ನು ಭೇಟಿ ಮಾಡುತ್ತೀರಾ ಎನ್ನುವುದು ನನ್ನ ಪ್ರಶ್ನೆಯಾಗಿದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಈ ವಿಷಯದಲ್ಲಿ ರಾಜ್ಯಕ್ಕೆ ಒಳ್ಳೆಯದಾಗತಕ್ಕಂಥ ದೃಷ್ಟಿಯಿಂದ ಸರ್ವ ಪ್ರಯತ್ನಗಳನ್ನು ಮಾಡತಕ್ಕಂಥದ್ದಕ್ಕೆ ನಾನು ಅವರಲ್ಲಿ ಏನು ಕೆಲವು ಹಿರಿಯರಿದ್ದಾರೆ, ಅವರಿಗೆ ಮನವಿ ಮಾಡಿದ್ದೇನೆ, ಈ ವಿಷಯದಲ್ಲಿ ನಾನು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡುವುದಕ್ಕೆ ಗಮನ ಹರಿಸಿದ್ದೇನೆಂಬುದನ್ನು ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ

ವಿಷಯ ಬರಪರಿಹಾರ ಕಾಯದಲ್ಲಿ ಜೆಸಿಬಿ ಯಂತ್ರಗಳನ್ನು ಉಪಯೋಗಿಸಿರುವುದರ ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕ ನಾಯಕನ ಹಳ್ಳಿ) ಅಧ್ಯಕ್ಷರೇ, Scracity ಕೆಲಸ ಮಾಡಬೇಕಾದರೆ machine use ಮಾಡುತ್ತೀರಿ ಎಂದು ಹೇಳಿ ನಮಗೆಲ್ಲ ಬರೆ ಹಾಕಿಬಿಟ್ಟು, ನಮ್ಮಲ್ಲಿ Engineers strike ಮಾಡಿ ನಾವು scracity ಕೆಲಸ ಮಾಡುವುದಿಲ್ಲ, ward side ನಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲವೆನ್ನುತ್ತಿದ್ದಾರೆ ನಮ್ಮ ಕಡೆ ಒರಟು ಭೂಮಿ ಇದೆ ಆಳುಗಳು ಸಿಗುತ್ತಿಲ್ಲ ಈ works ಎಲ್ಲ standstill ಆಗಿಬಿಟ್ಟಿದೆ ನಾವು ಇಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ ಮೇಲ್ಗಡೆ ನಾವೇನಾದರೂ JCB ನಿಂದ ಭೂಮಿಯನ್ನು ಸಡಿಲ ಮಾಡಿಕೊಂಡು ಆಮೇಲೆ ಆಳುಗಳನ್ನು ಕರೆಸುತ್ತೇವೆ ಕೆಲವು ಕಡೆ ಕೃಷಿ ಹೊಂಡ ಅಂಥವೆಲ್ಲ ಹೊಡೆಯಬೇಕಾದರೆ machine use ಮಾಡಲಿಕ್ಕೆ ಕೇಳಿದ್ದೆವು ಆದರೆ, ಇವತ್ತಿನವರೆವಿಗೂ permission ಕೊಡಲಿಲ್ಲ ನಮ್ಮ ತುಮಕೂರು DC ಯವರು notice ಕೊಟ್ಟು, ಇವತ್ತು ನಮ್ಮ ಎಲ್ಲ engineers ಕೆಲಸ ಮಾಡುವುದಿಲ್ಲವೆಂದು ನಮಗೆ ಮನವಿ ಕೊಟ್ಟಿದ್ದಾರೆ ಇದಕ್ಕೆ ತಾವೇನಾದರೂ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬರಬೇಕು ನಾವು ಇಲ್ಲಿಯೇ ನಿಂತುಕೊಂಡು ಹೇಳಿದ್ದೆವು, ಎಲ್ಲಾ ಕಡೆ ಬಳಸುತ್ತಿದ್ದಾರೆ, 6 ರೂ ಅಕ್ಕಿಯನ್ನು ತೆಗೆದುಕೊಳ್ಳುವವರೇ ದಿಕ್ಕಿಲ್ಲ, 3 ರೂ ಅಕ್ಕಿ PD system ನಲ್ಲಿ ಸಿಕ್ಕುತ್ತಿದೆ, ನಾವೇನಾದರೂ ಮಾಡಲಿಕ್ಕೆ ಅವಕಾಶ ಕೊಡಿ ಎಂದರೆ ಈವರೆಗೂ ನೀವು ಏನು ನಿಲವು ತೆಗೆದುಕೊಳ್ಳದೆ ಕೆಲಸ ಮಾಡಿರುವವರಿಗೆಲ್ಲಾ notice ಕೊಟ್ಟು ನಾವು ಹೇಳಿ ಕೆಲಸ ಮಾಡಿಸುವುದು ತಪ್ಪಿತಸ್ಥರಾಗುವಂಥ ಸ್ಥಿತಿ ನಿರ್ಮಾಣವಾಗಿದೆ ಆ ಬಗ್ಗೆ ತಾವೊಂದು ಮಾಹಿತಿ, ಹೇಳಿಕೆಯನ್ನು ಇಲ್ಲಿ ಕೊಡಬೇಕು

ಶ್ರೀ ವಾಟಾಳ್ ನಾಗರಾಜ್ JCB ಇಲ್ಲದೆ ಕೆಲಸ ಮಾಡುವುದಕ್ಕಾಗುವುದಿಲ್ಲ ವಸ್ತು ಸ್ಥಿತಿ ಇದೆ ಅದನ್ನು ಬಿಟ್ಟು ಸುಮ್ಮನೆ ಕೆಲಸ ಮಾಡಿ ಎಂದು ಹೇಳಿದರೆ ಇಡೀ

ರಾಜ್ಯದಲ್ಲಿ ಎಲ್ಲಿಯೂ ಕೆಲಸವಾಗುವುದಿಲ್ಲ ಆದ್ದರಿಂದ, ಸರ್ಕಾರದ ನಿರ್ಧಾರವೇನು, ಎಂದು ಸ್ಪಷ್ಟನೆ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್(ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು) ಈ ವಿಷಯವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ ಅದಕ್ಕೆ ಅವರು ಉತ್ತರ ಕೊಡುತ್ತಾರೆ ಆದರೆ, ತಮಗೆ ಗೊತ್ತಿದ್ದಂತೆ, ಕೇಂದ್ರ ಸರ್ಕಾರ ಕಳುಹಿಸಿಕೊಟ್ಟಿರತಕ್ಕಂಥ ಮಾರ್ಗದರ್ಶನ ಸೂತ್ರಗಳಲ್ಲಿ ಯಂತ್ರಗಳನ್ನು ಉಪಯೋಗಿಸಬಾರದು ಎಂದು ಹೇಳಿ ಅವರು ಅಖಿಲ ಭಾರತ ಮಟ್ಟದಲ್ಲಿ ಯೋಚನೆ ಮಾಡಿ ಕಳುಹಿಸಿದ್ದಾರೆ ಆದರೆ, ನನಗೂ ನಿಮಗೂ, ಎಲ್ಲರಿಗೂ ಗೊತ್ತಿದ್ದಂತೆ ವಾಸ್ತವವಾದ ಸಂಗತಿಯಲ್ಲಿ 69 ರೂಪಾಯಿಗಳ ಕೂಲಿಗೆ ಕೂಡ ಮಲೆನಾಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಭಾಗಗಳಲ್ಲಿ ಅನೇಕ ಜನ ಕೆಲಸಕ್ಕೆ ಬರುವುದಿಲ್ಲ ಆಗ ಅಭಿವೃದ್ಧಿ ಪರವಾಗಿರತಕ್ಕಂಥ ಕೆಲಸಕಾರ್ಯಗಳನ್ನು ಮಾಡುತ್ತಾ ಹೋಗುತ್ತಿರುವಾಗ, ಯಂತ್ರಗಳನ್ನು ಅನೇಕ ಸಂದರ್ಭಗಳಲ್ಲಿ ಉಪಯೋಗಿಸಲೇಬೇಕಾಗುತ್ತದೆ ಗಟ್ಟಿಯಾದಂಥ ಭೂಮಿ ಇದ್ದರೆ ಎಲ್ಲರೂ ಕೂಲಿಗೆ ಬಂದಿರತಕ್ಕಂಥವರು ಅಷ್ಟು ಪ್ರಮಾಣದಲ್ಲಿ ಮಣ್ಣನ್ನು ತೆಗೆದುಹಾಕುವುದಿಲ್ಲ ಇಂಥ ಸಂದರ್ಭಗಳು ಬಂದಾಗ ಯಂತ್ರಗಳನ್ನು ಉಪಯೋಗಿಸಿರುವ ಉದಾಹರಣೆಗಳಿವೆ ಪಕ್ಕದ ಆಂಧ್ರ ಪ್ರದೇಶ ಮೊದಲಾದ ಕಡೆಗಳಲ್ಲಿ ಯಂತ್ರಗಳನ್ನೂ ಉಪಯೋಗಿಸಿದ್ದಾರೆ, ಅಕ್ಕಿಯನ್ನೂ ಮಾರಿದ್ದಾರೆ, ಆದರ, ಯಾರೂ ಅದನ್ನು ವಿವಾದ ಮಾಡುವುದಿಲ್ಲ ಆದರೆ, ಇಲ್ಲಿ ನಾವು ವಿವಾದ ಮಾಡಿಕೊಂಡು ಹಿಂದೆ ಅನುಭವಿಸಿದ್ದೇವೆ ಸ್ಪರ್ಧಿತಗೊಳಿಸಿರತಕ್ಕಂಥದ್ದು ಇದೆ ಆ ದೃಷ್ಟಿಯಿಂದ, ಇದನ್ನು ಬಹಳ ಜಾಣ್ಮೆಯಿಂದ ಕೇಂದ್ರ ಸರ್ಕಾರದ ಮಾರ್ಗದರ್ಶನ ಸೂತ್ರಗಳಿಗೆ ನಾವು ವಿರೋಧವಾಗಿದ್ದೇವೆಂದು ಎಂಬೂ ಕೂಡ ತೋರಿಸಿ ಕೊಡದೇ ಮಾನ್ಯ ಮಂತ್ರಿಗಳಿಂದ ತಾವು ಪ್ರಸ್ತಾಪ ಮಾಡಿದಂಥ ವಿಷಯಕ್ಕೆ ಈಗ ಕೂಡಲೇ ತುಮಕೂರಿನ ಜಿಲ್ಲಾಧಿಕಾರಿಗಳಯವರ ಜೊತೆ ನಮ್ಮ ಕಾರ್ಯದರ್ಶಿಯವರು ಮಾತನಾಡಿ ಕೆಲಸ ಪ್ರಾರಂಭ ಮಾಡಿಸುತ್ತಾರೆ ಆ ಸಮಸ್ಯೆ ಎಲ್ಲ ಕಡೆ ಇಲ್ಲ ತುಮಕೂರಿನಲ್ಲಿ ಬಂದಿದೆ ಅದೂ ಕೂಡ ವೈಯಕ್ತಿಕ ಕಾರಣಕ್ಕಾಗಿ ಬಂದಿದೆ

ಶ್ರೀ ಜೆ ಸಿ ಮಾಧುಸ್ವಾಮಿ ಆ notice ಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಹೇಳಿ ಸರ್

ಶ್ರೀ ಎಂ ಪಿ ಪ್ರಕಾಶ್ ಆಗಬಹುದು, ಮಾತನಾಡುತ್ತೇನೆ

4 <u>ನಿಲುವಳಿ ಸೂಚನೆ ಮಂಡನೆ ಬಗ್ಗೆ ಪೂರ್ವಭಾವಿ ಚರ್ಚೆ</u>

ವಿಷಯ ಕಾನೂನು ಬಾಹಿರ ಗಣಿಗಾರಿಕೆ ಬಗ್ಗೆ ತನಿಖೆ ಮಾಡಲು ರಚಿಸಿದ್ದ ಯು ಎಲ್ ಭಟ್ ಕಮಿಷನ್‌ನ್ನು ರದ್ದು ಪಡಿಸಿರುವ ಬಗ್ಗೆ

ಶ್ರೀ ಎನ್ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು) ಈ ದಿನ ನಾವು ನಿಲುವಳಿ ಸೂಚನೆ ಕೊಟ್ಟಿದ್ದೇವೆ